"ನಿಮ... ನಿಮನಿಮನಿಮನಿಮ..." ಎನ್ನುತ್ತ ಲುಂಗಿ ಏರಿಸಿ ಕಟ್ಟಿಕೊಂಡ. ಅತ್ತ ಇತ್ತ ಕಣ್ಣು ಹಾಯಿಸಿದ. ಅವನು ಹಾಗೆ ನಡುಗುವುದು ಕಂಡು ಅಜ್ಜಿಯೂ ಕರಗಿದಳು.

"ಏಯ್, ಏಯ್ ಅಶೋಕಾ, ಅಷ್ಟು ತ್ರಾಸು ಮಾಡ್ಕಂಬ್ಯಾಡ ಮಗಾ. ಕೊಟ್ಟಾಕು... ಕೊಟ್ಟಾಕು ಅದಕೆ. ಏನರೂ ಮಾಡ್ಕಂಡು ಸಾಯಲಿ. ನೀನು ಸಮಾಧಾನ ಮಾಡ್ಕೊ" ಎಂದು ಮಾಮನ ಮೈದಡವಲು ಬಂದಳು.

ನಡುಗುತ್ತಿದ್ದ ಮಾಮ ಒಂದು ಕ್ಷಣ ತಡೆದು ಪಕ್ಕದಲ್ಲೇ ನಿಂತಿದ್ದ ನನ್ನ ಕಪಾಳಕ್ಕೆ ಫಳೀರನೆ ಬಿಗಿದುಬಿಟ್ಟ.

"ಇನ್ನೈದು ವರ್ಷ ಬಿಟ್ಟರೆ ಈ ಹಡಬೇನೂ ತಯಾರಾಗೂದು" ಅಂದ.

ನನಗೆ ಅವನು ಬೀಸಿದ ಏಟು ಮತ್ತು ಅವನಾಡಿದ ಮಾತು ಒಳಗಿಳಿಯಲು ನಿಮಿಷಗಳೇ ಬೇಕಾದವು. ಆ ಕೋಣೆಯ ಯಾವ ಹೆಂಗಸಿಗೆ ಬೀಳಬೇಕಾದ ಏಟೋ ಅದು, ವಯಸ್ಸಿನ ಕಾರಣದಿಂದಷ್ಟೇ ನನಗೆ ಬಿದ್ದಿತ್ತು.

ನನ್ನ ಜೀವನದ ಮೊದಲ ಏಟಾಗಿತ್ತದು. ಕ್ಲಾಸಿನಲ್ಲಿ ತಕ್ಕಮಟ್ಟಿಗೆ ಚೆನ್ನಾಗಿದ್ದ ಕಾರಣ ಯಾವ ಟೀಚರುಗಳೂ ನನ್ನ ಮೇಲೆ ಕೈಯೆತ್ತಿದ್ದೇ ಇರಲಿಲ್ಲ. ಮನೆಯಲ್ಲಿ ಅಪ್ಪಅಮ್ಮ ಗದರುತ್ತಿದ್ದರೇ ವಿನಃ ಹೊಡೆಯುತ್ತಿರಲಿಲ್ಲ. ನಾನೇನಾದರೂ ತಪ್ಪು ಮಾಡಿದರೆ, ಆ ವಾರ ಸುತ್ತಾಡಲು ಕರೆದೊಯ್ಯದೇ ಇರುವುದು, ಪ್ರತಿ ಶನಿವಾರ ಕೊಡಿಸುವ ಐಸ್‌ಕ್ರೀಮ್ ಕೊಡಿಸದೇ ಇರುವುದು ಮುಂತಾದವುಗಳೇ ನನಗೆ ಆ ತನಕ ಸಿಕ್ಕ ಶಿಕ್ಷೆಗಳಾಗಿದ್ದವು. ಸಿನಿಮಾದಲ್ಲಿ ಮಾತ್ರ ಈ ರೀತಿ ಕಪಾಳಕ್ಕೆ ಹೊಡೆಯುವುದು ಕಂಡಿದ್ದೆ.

ಅನಂತರ ಕೋಣೆಯಲ್ಲಾದ ಯಾವುದೂ ನನ್ನ ತಲೆಯಲ್ಲಿ ದಾಖಲಾಗಲಿಲ್ಲ. ಮಾಮ ಹೊಡೆದಲ್ಲಿ ಚರ್ಮ ಭಗಭಗ ಉರಿಯುತ್ತಿತ್ತು. ಆ ಹೊಡೆತದ ವಿಸ್ತರಣೆಯಾಗಿ ತಲೆ ನೋಯುತ್ತಿತ್ತು. ಆ ಕ್ಷಣವನ್ನು ಮತ್ತೆ ಮತ್ತೆ ನನ್ನೊಳಗೆ ಮರುಕಳಿಸಿಕೊಳ್ಳುತ್ತ ಬಹಳ ಹೊತ್ತು ಅಲ್ಲೇ ನಿಂತುಳಿದೆ. ಆ ಬಿಗಿತದಿಂದ ಹೊರಟ ಸದ್ದು ಮತ್ತು ಅವನಾಡಿದ ಮಾತಿನ ಚಾಟಿ ಹನಿಹನಿಯಾಗಿ ಇಳಿದು ನನ್ನೊಳಗಿನ ಏನೋ ಒಂದನ್ನು ಕಾಯಮ್ಮಾಗಿ ಛಿದ್ರಗೊಳಿಸಿಬಿಟ್ಟಿತು. ಸಂಜೆಯ ಒಳಗೆ ಮೆಹು ಮಾಮಿ ಮತ್ತು ಸದಾ ಕೋಣೆಯನ್ನು ಖಾಲಿ ಮಾಡಿದ್ದರು. ಮುಂದಿನ ಎರಡೇ ದಿನಗಳಲ್ಲಿ ಅಮ್ಮ ಬಂದು ನನ್ನನ್ನು ಹುಬ್ಬಳ್ಳಿಗೆ ಕರೆದೊಯ್ದಳು. ಆ ದಿನದ ಅನಂತರ ನಾನೂ, ಅಮ್ಮನೂ ಅಶೋಕಮಾಮನ ಮುಖಕ್ಕೆ ಮುಖ ಕೊಟ್ಟು ಮಾತನಾಡುವುದನ್ನೇ ಬಿಟ್ಟುಬಿಟ್ಟೆವು. ಮುಂದೆ ರಜೆಯಲ್ಲೂ ಟ್ಯೂಷನ್ ಕ್ಲಾಸು, ವಿವಿಧ ಪರೀಕ್ಷೆಗಳ ತಯಾರಿ ಎಂದು ಯಲ್ಲಾಪುರಕ್ಕೆ ಹೋಗಿ ಉಳಿಯುವುದು ಕ್ರಮೇಣ ತಪ್ಪಿಹೋಯಿತು.

ಇದೆಲ್ಲ ನಡೆದು ಹದಿನೈದು ವರ್ಷಗಳೇ ಕಳೆದಿವೆ. ನಾನು ಪತ್ರಿಕೆಯ ಕೆಲಸದ ಮೇಲೆ ಯಲ್ಲಾಪುರ ಮಾರ್ಗವಾಗಿ ಹೋಗುವಾಗ ಅಜ್ಜಿಯ ಮನೆಯಲ್ಲಿ ಒಂದೇ ಗಳಿಗೆ ಚಹಕ್ಕೆ ನಿಂತು ಹೋಗುವುದಿದೆ. ಮೆಹು ಮಾಮಿ ಮತ್ತು ಸದಾರ ವಿಷಯ ತೆಗೆದರೆ ಪ್ರತಿ ಬಾರಿಯೂ ಸುಗಂಧಿ ಮಾಮಿ ಮಾತು ಮರೆಸುತ್ತಾಳೆ. ಅಜ್ಜಿ ಈಗ ಯಾವ ನೆನಪೂ ತಾಕದಂತೆ ದಣಪೆಯಲ್ಲಿ "ಹುಶ್ಯಪ್ಪಾ" ಎಂದು ಸೆರಗಿನಲ್ಲಿ ಗಾಳಿ ಹಾಕಿಕೊಳ್ಳುತ್ತ ಕುಳಿತಿರುತ್ತಾಳೆ. ಚಂದು ಮಾಮನ ನೆನಪು ತೆಗೆಯಲು ಪ್ರಯತ್ನಿಸಿದರೆ, "ಹಾಂ ಹಾಂ, ಇಲ್ಲೇ ಇರ್ವಾ... ಏ ಚಂದೂ ಮಾತ್ರ ಬಾರೋ ಇಲ್ಲಿ ಅಮೃತಾಂಜನ ತಂದು ಕೊಡೋ" ಎಂದು ಒಳಮನೆಯತ್ತ ಕಣ್ಣು ಹಾಯಿಸುತ್ತಾಳೆ.

ಅತ್ತ ಅಮ್ಮನಂತೂ, "ಯಾವ ಸದಾನೇ? ಮಗ ಅಲ್ಲ. ಸಬೀನಾ ಅನ್ನೋ ಮಗಳಲ್ಲ ಅದಕ್ ಇದ್ದದ್ದು?" ಎಂದು ಬೇರೆಯದೇ ವರಸೆ ತೆಗೆಯುತ್ತಾಳೆ. ಹೀಗಾಗಿ, ಆ ದಿನಗಳ ಎಷ್ಟೊಂದು ಎಳೆಗಳು